ದಿನಾಂಕಃ 03.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ವಿ.ಎಸ್. ವಕೀಲರಿಂದಃ

| | |
|---|---|
| ನಿ.ಪಿ.18 ಮತ್ತು 19 | 2 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ಗುರುತಿಸಲಾಯಿತು. |
| ನಿ.ಪಿ.20 ರಿಂದ 26 | 7 ಭಾವ ಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ಗುರುತಿಸಲಾಯಿತು. |

ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥನೆ.

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎಂ.ಎಸ್. ವಕೀಲರಿಂದಃ

1. ನೀವು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದೂರು ಕೊಟ್ಟಂತಹ ನಿಮ್ಮ ತಮ್ಮನವರೂ ಸಹ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ . ಅಪಘಾತವಾದ ದಿನ ನಿಮ್ಮ ಮಗನ ಜೊತೆ ಆತನ ಸ್ನೇಹಿತರೂ ಸಹ ಇದ್ದರು ಎಂದರೆ ಸರಿ. ನಿಮ್ಮ ಮಗನ ಸ್ನೇಹಿತರಿಗೆ ಅಪಘಾತವಾದ ದಿನವೇ ಹೋಗಿ ಪೋಲೀಸ್ ದೂರು ಕೊಡಲು ಏನೂ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆ ವೇಳೆಯಲ್ಲಿ ಆಸ್ಪತ್ರೆಯಲ್ಲಿದ್ದೆವು ಎಂದು ಹೇಳುತ್ತಾರೆ.

2. ನಿಮ್ಮ ಮಗನಿಗೆ ಅಪಘಾತವಾದ ತಕ್ಷಣ ಕೆಂಪಣ್ಣ ಆಸ್ಪತ್ರೆಗೆ ದಾಖಲು ಮಾಡಿದವರು ಯಾರು ಎಂದರೆ ಸಾಕ್ಷಿಯು ನನ್ನ ಮಗನ ಜೊತೆಯಲ್ಲಿರುವ ಸ್ನೇಹಿತರು ಎಂದು ಹೇಳುತ್ತಾರೆ. ಕೆಂಪಣ್ಣ ಆಸ್ಪತ್ರೆಯಿಂದ ನಿಮ್ಮ ಮಗನನ್ನು ಬೇರೆ ಆಸ್ಪತ್ರೆಗೆ ಅದೇ ದಿನ ಶಿಫ್ಟ್ ಮಾಡಿದರಾ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ಆಸ್ಪತ್ರೆಯವರು ಅಪಘಾತವಾದ ಬಗ್ಗೆ ಪೋಲೀಸರಿಗೆ ಇಂಟಿಮೇಷನ್ ಮಾಡಿರುವ ಬಗ್ಗೆಯಾಗಲಿ ಹಾಗೂ ಪೋಲೀಸರು ಆಸ್ಪತ್ರೆಗೆ ಬಂದ ಬಗ್ಗೆಯಾಗಲಿ ನಿಮಗೇನಾದರೂ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. ಕೆಂಪಣ್ಣ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಎಂ.ಎಲ್.ಸಿ ಆಗಿದ್ದರೆ ಆದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ಅಪಘಾತ ಹೇಗೆ ಆಗಿದೆ ಎಂಬುದರ ಬಗ್ಗೆ ದೂರು ಕೊಡುವಾಗ ನಿಮಗೆ ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿಯು ನನ್ನ ಮಗನ ಸ್ನೇಹಿತರು ಎಂದು ಹೇಳುತ್ತಾರೆ. ಅಪಘಾತವಾಗಿ 2 ದಿನಗಳ ನಂತರ ದೂರನ್ನು ಕೊಡಲಾಗಿದೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ.

4. ನಿಮ್ಮ ಮಗ ಸ್ನೇಹಿತರ ಜೊತೆ ಬೈಕಿನಲ್ಲಿ ಹೋಗುವಾಗ ಈ ಅಪಘಾತವಾಗಿದೆ ಎಂದರೆ ಸಾಕ್ಷಿಯು ಅಲ್ಲ, ನನ್ನ ಮಗ ರಸ್ತೆ ದಾಟುತ್ತಿರುವಾಗ ಆಟೋ ಬಂದು ಗುದ್ದಿದೆ ಎಂದು ನುಡಿಯುತ್ತಾರೆ. ನಿಮ್ಮ ಮೋಟರ್ ಸೈಕಲ್ ಗೆ ಯಾವುದೇ ರೀತಿಯಾದ ದಾಖಲೆಗಳು ಇಲ್ಲದೇ ಇದ್ದ ಕಾರಣ ಆಟೋ ಬಂದು ನಡೆದುಕೊಂಡು ಹೋಗುತ್ತಿದ್ದಂತಹ ನಿಮ್ಮ ಮಗನಿಗೆ ಡಿಕ್ಕಿ ಪಡಿಸಿದೆ ಎಂದು ಸುಳ್ಳು ದೂರು ಕೊಟ್ಟಿದ್ದೀರಾ ಎಂದರೆ ಸರಿಯಲ್ಲ.

5. ನೀವು ಹಾಜರುಪಡಿಸಿದಂದತಹ ಕೆಂಪಣ್ಣ ಮತ್ತು ಮಣಿಪಾಲ ಆಸ್ಪತ್ರೆಯ ಮೆಡಿಕಲ್ ಬಿಲ್ಲುಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

6. ನಿಮ್ಮ ಮಗ ಜಿಮ್ ಗೆ ಟ್ರೈನರ್ ಆಗಿ ಹೋಗುತ್ತಿರಲಿಲ್ಲ ಆದರೆ ಜಿಮ್ ಗೆ ಮಾತ್ರ ಹೋಗುತ್ತಿದ್ದ ಎಂದರೆ ಸರಿಯಲ್ಲ. ಜಿಮ್ ಮಾಲೀಕರ ಸಾಕ್ಷಿ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ನೀವು ಏನು ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿ ಕೂಲಿ ಕೆಲಸ ಎಂದು ಹೇಳುತ್ತಾರೆ ಅಪಘಾತದ ಸಮಯದಲ್ಲಿ ನಿಮ್ಮ ಮಗ ಬಿ.ಕಾಂ ಓದುತ್ತಿದ್ದರು ಎಂದರೆ ಸರಿ. ನಿಮ್ಮ ಮಗ ವಿದ್ಯಾರ್ಥಿಯಾಗಿದ್ದರಿಂದ ಅವರು ಯಾವುದೇ ರೀತಿಯ ಕೆಲಸ ಮಾಡುತ್ತಿರಲಿಲ್ಲ ಅವರು ನಿಮ್ಮ ಆದಾಯದ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ.

7. ನಿಮ್ಮ ಮಗನ ಶವ ಸಂಸ್ಕಾರಕ್ಕಾಗಿ ರೂ.1 ಲಕ್ಷ ಗಳನ್ನು ವೆಚ್ಚ ಮಾಡಿದ್ದೀರಾ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲಲ. ನಿಮ್ಮ ಮಗನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಪಡೆಯುವಗೋಸ್ಕರ ನೀವು ಪೋಲೀಸರ ಜೊತೆ ಶಾಮೀಲಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು